ಆ. ಕೊಳ್ಳೇಗಾಲ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಕೊಳ್ಳೇಗಾಲ–ಬೆಳಕವಾಡಿ ಮತ್ತು ಕೊಳ್ಳೇಗಾಲ–ಬ್ಲಫ್–ಮಳವಳ್ಳಿ ಮಾರ್ಗದ ಮುಖ್ಯ ರಸ್ತೆಯು ರಾಷ್ಟ್ರೀಕೃತ ವಲಯಕ್ಕೆ ಸೇರಿದ್ದು, ಉಳಿದ ಎಲ್ಲಾ ಮಾರ್ಗಗಳು ರಾಷ್ಟ್ರೀಕೃತ ವಲ್ಲದ ವಲಯಕ್ಕೆ ಸೇರಿರುತ್ತವೆ. ಆದಾಗ್ಯೂ ಸಾರ್ವಜನಿಕ ಪ್ರಯಾಣಿಕರ ಕೋರಿಕೆ ಮೇರೆಗೆ ರಾಷ್ಟ್ರೀಕೃತವಲ್ಲದ ವಲಯದಲ್ಲಿನ 35 ಗ್ರಾಮಗಳಿಗೆ ಕೊಳ್ಳೇಗಾಲ ಘಟಕದಿಂದ ಸಾರಿಗೆ ವ್ಯವಸ್ಥೆಯನ್ನು ಕಲಿಸಲಾಗಿದೆ.

ಇ. ಹೌದು.

ಈ. ರಾಷ್ಟ್ರೀಕೃತವಲ್ಲದ ವಲಯದಲ್ಲಿ ಬರುವ ಗೌಡಹಳ್ಳಿ ಮಾರಾಪಾಳ್ಯ ದಾಸನದೊಡ್ಡಿ ಮಾರ್ಗಗಳಲ್ಲಿ ಪ್ರಸ್ತುತ ಸಾರ್ವಜನಿಕ ಪ್ರಯಾಣಿಕರು ಖಾಸಗಿ ವಾಹನಗಳ ಸಾರಿಗೆ ಸೌಲಭ್ಯವನ್ನು ಬಳಸಿಕೊಳ್ಳುತ್ತಿರುವುದರಿಂದ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ರದ್ದುಗೊಳಿಸಿರುವ ಎರಡು ದುಂಡು ಸುತ್ತುವಳಿ ಕಾರ್ಯಚರಣೆ ಪುನರಾರಂಭಿಸುವ ಅವಶ್ಯಕತೆ ಸದ್ಯಕ್ಕೆ ಕಂಡು ಬಂದಿರುವುದಿಲ್ಲ.

ಉ. ಪ್ರಸಕ್ತ ಸಾಲಿನಲ್ಲಿ ಕೊಳ್ಳೇಗಾಲ ಘಟಕಕ್ಕೆ 8 ಹೊಸ ವಾಹನಗಳನ್ನು ನೀಡಲಾಗಿದೆ. ಅವುಗಳಲ್ಲಿ 4 ಗ್ರಾಮಾಂತರ ಸಾರಿಗೆ ವಾಹನಗಳು ಸೇರಿರುತ್ತವೆ.

192 (304) ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು) ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಜಗತ್ ವಿಖ್ಯಾತ ಜೋಗ್ ಪ್ರವಾಸಿ ಕೇಂದ್ರಕ್ಕೆ ಪ್ರತೀ ವರ್ಷ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಎಷ್ಟು; (ಕಳೆದ 3 ವರ್ಷಗಳ ವಿವರಗಳನ್ನು ನೀಡುವುದು);

ಆ. ಈ ಪ್ರವಾಸಿಗರನ್ನು ವಿದೇಶಿ ಪ್ರವಾಸಿಗರ ಸಂಖ್ಯೆ ಎಷ್ಟು; (3ವರ್ಷಗಳ ವಿವರ ನೀಡುವುದು);

ಇ. ಸರ್ಕಾರ ತನ್ನ ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸಲಿದೆಯೇ;

ಈ. ಹಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಬಿ.ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಜವಳಿ ಸಚಿವರು)

ಅ. ಜೋಗ್ ಜಲಪಾತ ಪ್ರವಾಸಿ ಕೇಂದ್ರಕ್ಕೆ ಕಳೆದ 3 ವರ್ಷಗಳಿಂದ ಭೇಟಿ ನೀಡಿರುವ ದೇಶಿಯ ಪ್ರವಾಸಿಗರ ಸಂಖ್ಯೆ ಕೆಳಗಿನಂತಿದೆ.

1. 2003ನೇ ಸಾಲಿನಲ್ಲಿ 2,83,503
2. 2004ನೇ ಸಾಲಿನಲ್ಲಿ 4,28,766
3. 2005ನೇ ಸಾಲಿನಲ್ಲಿ 4,89,423

ಆ. ಜೋಗ್ ಜಲಪಾತ ಪ್ರವಾಸಿ ಕೇಂದ್ರಕ್ಕೆ ಕಳೆದ 3 ವರ್ಷಗಳಿಂದ ಭೇಟಿ ನೀಡಿರುವ ವಿದೇಶಿ ಪ್ರವಾಸಿಗರ ಸಂಖ್ಯೆ ಈ ಕೆಳಕಂಡಂತಿದೆ.

1. 2003ನೇ ಸಾಲಿನಲ್ಲಿ 569

2. 2004ನೇ ಸಾಲಿನಲ್ಲಿ 671

3. 2005ನೇ ಸಾಲಿನಲ್ಲಿ 918

ಇ. ಇಲಾಖೆಯು 2002–07ನೇ ಸಾಲಿಗೆ ಸಂಬಂಧಿಸಿದಂತೆ ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸಿರುತ್ತದೆ.

ಈ. ಇಲಾಖೆಯು ಪ್ರಕಟಿಸಿರುವ 2002–07ನೇ ಸಾಲಿನ ಪ್ರವಾಸೋದ್ಯಮ ರೀತಿಯಲ್ಲಿ ಪ್ರವಾಸೋದ್ಯಮದಲ್ಲಿ ಬಂಡವಾಳ ಹೂಡಲು ಮುಂದೆ ಬರುವ ಖಾಸಗೀ ಉದ್ದಿಮೆದಾರರಿಗೆ ಕೆಳಕಂಡ ಉತ್ತೇಜನ ಹಾಗೂ ರಿಯಾಯ್ತಿಗಳನ್ನು ಪ್ರಕಟಿಸಲಾಗಿದೆ.

1. 2002–07ನೇ ಕೈಗಾರಿಕಾ ನೀತಿಯಲ್ಲಿ ನೀಡಲಾಗಿರುವ ಎಲ್ಲಾ ರಿಯಾಯಿತಿಗಳು ಪ್ರವಾಸೋದ್ಯಮದಲ್ಲಿ ಬಂಡವಾಳ ಹೂಡುವ ಖಾಸಗಿ ಉದ್ದಿಮೆದಾರರಿಗೆ ಲಭ್ಯವಿರುತ್ತವೆ.

2. ರೂ.400 ಮೇಲ್ಪಟ್ಟ ಕೊಠಡಿಗಳ ಬಾಡಿಗೆಗೆ ವೈಭೋಗ ತೆರಿಗೆಯನ್ನು ವಿಧಿಸಬೇಕು ಹಾಗೂ ನಿಖರವಾಗಿ ಪಾವತಿಸಿದ ಬಾಡಿಗೆಗೆ ಮಾತ್ರ ತೆರಿಗೆ ವಿಧಿಸಬೇಕು. ಇದು ಗರಿಷ್ಠ ಶೇಕಡ 10ರ ಮಿತಿಯಲ್ಲಿರಬೇಕು.

3. ಭೂಪರಿವರ್ತನಾ ಶುಲ್ಕ ವಿನಾಯಿತಿ.

4. ಯೋಜನೆಯನ್ನು ನಿರ್ಮಿಸುವಾಗ 3 ವರ್ಷಗಳ ವರೆಗೆ ಪ್ರವೇಶ ತೆರಿಗೆ ವಿನಾಯಿತಿ.

5. ಐ–ಮ್ಯಾಕ್ಸ್ ಥಿಯೇಟರ್‌ಗಳಿಗೆ ಮಾತ್ರ ಮೊದಲ 3 ವರ್ಷಗಳ ವರೆಗೆ ಶೇಕಡ 100ರಂತೆ ಮನರಂಜನಾ ತೆರಿಗೆ ವಿನಾಯಿತಿ ನಂತರದ 2 ವರ್ಷಗಳವರೆಗೆ ಶೇ.75 ರಂತೆ ಮನರಂಜನಾ ತೆರಿಗೆ ವಿನಾಯಿತಿ.

***193* (*305*)** ಶ್ರೀ ಬಸವಣ್ಣೆಪ್ಪ ಜಿ. (ಹೊಳೆಹೊನ್ನೂರು)

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯ ಮಂತ್ರಿಗಳು) ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವವರು.

ಅ. ಬೆಂಗಳುರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇರುವ ಪ್ರಮುಖ ರಸ್ತೆಗಳ ಉದ್ದವೆಷ್ಟು (ಪ್ರತಿ ರಸ್ತೆಯ ಹೆಸರು ಮತ್ತು ಅದರ ಉದ್ದವನ್ನು ತಿಳಿಸುವುದು);